

ಮೊನಾಕೊ ಬಂದರಿನಲ್ಲಿ 'ಆಕಾಶದಲ್ಲೇ ಸ್ವಾಹಾ ಮಾಡಿ' ಎಂದು ಕ್ರೇನ್‌ನಲ್ಲಿ ಆಕಾಶಕ್ಕೊಯ್ದು ಹೊಟ್ಟೆ ತುಂಬಿಸುವ ಕೆಲಸ ಮಾಡುತ್ತಿದ್ದಾರೆ. ತಿಂಡಿ- ತಿನಿಸು, ಪಾನೀಯ, ಪ್ಲೇಟು, ಪರಿಚಾರಿಕೆಯರು, ಅತಿಥಿಗಳು ಎಲ್ಲರೂ ಮೇಲಕ್ಕೆ ಟೇಕಾಫ್. ಆದರೆ ತಿಂದದ್ದು ಹೆಚ್ಚು ಕಡಿಮೆಯಾಗಿ ಹೊರಬರುವ ಆತುರ ತೋರಿದರೆ..?

ಅಮೆರಿಕದ ಈ ಅಜ್ಜಿಯರು ನಾಟಿ ನಿಟ್ಟರ್ಸ್. ತಾವೇ ಹೆಣೆದ ಉಣ್ಣೆ ಶಾಲಿನಲ್ಲಿ ಮಾನ ಮುಚ್ಚಿಕೊಂಡು ಕ್ಯಾಲೆಂಡರ್ ಒಂದಕ್ಕೆ ಪೋಸ್ ನೀಡಿದ್ದಾರೆ. ಈ ವಯಸ್ಸಿನಲ್ಲೂ? ಎಂದು ಕೆಣಕಬೇಡಿ. ಆಟಿಸಂ (ಕಲಿಕಾ ತೊಂದರೆ) ಇರುವ ಇಬ್ಬರು ಮೊಮ್ಮಕ್ಕಳ ಚಿಕಿತ್ಸೆಗಾಗಿ ಹಣ ಸೇರಿಸಲು ಹೊರಟಿದ್ದಾರೆ ಈ ಅಜ್ಜಿಯರು. ಬೇಡುವುದಕ್ಕಿಂತ ಬಾಡಿ ತೋರಿಸಿ ಹಣ ಮಾಡುವುದು ಒಳ್ಳೆಯದು ಎನಿಸಿರಬೇಕು.



ಇಟಲಿಯ ಪ್ರಧಾನಿ ಸಿಲ್ವಿಯೊ ಬೆರ್ಲುಸ್ಕೋನಿಗೆ ವಯಸ್ಸು 73 ಆದರೂ 23ರ ಹುಮ್ಮಸ್ಸು. ಮಿಲಾನ್‌ನಲ್ಲಿ ನಡೆದ 30 ಮೆಡಿಟರೇನಿಯನ್ ದೇಶಗಳ ರಾಯಭಾರಿಗಳ ಸಮಾವೇಶದಲ್ಲಿ ಭಾರೀ ಕರೆಯನ್ನೇ ನೀಡಿದರು, 'ಇಟಲಿಗೆ ಬರುವಾಗ ಸುಂದರಿಯರನ್ನು ಕರೆತನ್ನಿ' ಎಂದು. ಪ್ಲೇ ಬಾಯ್ ಸಿಲ್ವಿಯೊ ಈಗ ಪ್ಲೇ ಓಲ್ಡ್ ಆದರೂ ಹುಳಿ ಮುಪ್ಪೇ ಎಂಬ ಕುಹಕ ಕೇಳಿಬಂತಂತೆ.

ವಿಶ್ವಕಪ್ ಫುಟ್ಬಾಲ್ ಗೆದ್ದಿದ್ದೇ ಗೆದ್ದಿದ್ದು ಸ್ಪೇನಿನಲ್ಲೀಗ ಹುಚ್ಚುಹೊಳೆ ಪಾನೀಯದ್ದು. ಗಂಟಲಿಗೆ ಸುರಿದುಕೊಂಡ ಪಾನೀಯ ಹೊಟ್ಟೆಯೊಳಗೆ ಜಾಸ್ತಿ ಹೊತ್ತು ನಿಲ್ಲಲಾರೆ ಎಂದಾಗ ರಸ್ತೆ ಪಕ್ಕ ಖಾಲಿ ಮಾಡುವವರ ಕಿರಿಕಿರಿ ಬೇರೆ. ಕ್ಲೀನಿಂಗ್, ಖಾಲಿ ಮದ್ಯದ ಬಾಟಲ್ ಎತ್ತಿ ಸಾಗಿಸುವುದಕ್ಕಿಂತ ಫುಟ್ಬಾಲ್ ಪಂದ್ಯ ಗೆಲ್ಲುವುದೇ ಸಲೀಸು ಎನ್ನಿಸಿ ಬಿಟ್ಟಿದೆಯಂತೆ ಮ್ಯಾಡ್ರಿಡ್ ಪಾಲಿಕೆ ಸಿಬ್ಬಂದಿಗೆ.





ಭಾರತದಲ್ಲಿ ವಾಸ್ತು ರಸ್ತೆಗಿಳಿದು ಬಹಳ ಕಾಲವಾಯ್ತು. ಈಗ ನಾಗ್ಪುರ ಪೊಲೀಸರು ಪಿರಾಮಿಡ್‌ನ ಸೂಪರ್‌ನ್ಯಾಚುರಲ್ ಶಕ್ತಿಯನ್ನು ರಸ್ತೆಗಿಳಿಸಿ ಅಪಘಾತ ತಡೆಯಲು ಹೊರಟಿದ್ದಾರೆ. ರಸ್ತೆಯ ಅಕ್ಕಪಕ್ಕ ಒಂದು ಅಡಿ ಎತ್ತರದ ಪಿರಾಮಿಡ್‌ಗಳು ನಾಗ್ಪುರ ರಸ್ತೆಯನ್ನು ಅಲಂಕರಿಸಲಿವೆ. ರಸ್ತೆಯ ಅಕ್ಕಪಕ್ಕ ಅಪಘಾತವಾಗುವುದನ್ನು ತಡೆಯಲಾ?

ಕಲಾಕೃತಿಯಲ್ಲಿ ಐಕ್ಯವಾಗುವುದೆಂದರೆ ಇದು. ಹಾಂಕಾಂಗ್ ಷಾಪಿಂಗ್ ಮಾಲ್‌ನಲ್ಲಿ ಅಮೆರಿಕದ ಕಲಾವಿದ ಲೀ ನಿರ್ಮಿಸಿದ 3-ಡಿ ಕಲಾಕೃತಿ. 3-ಡಿ ಸಿನಿಮಾ, 3-ಡಿ ಟಿವಿ ಬಂದ ನಂತರ ಈ ಕಲಾಕೃತಿಯೂ ಜನಪ್ರಿಯ.



ದಕ್ಷಿಣ ಅಮೆರಿಕದ ಲಿಮಾದಲ್ಲಿ ನಡೆದ ಚಾಕೊಲೇಟ್ ಉತ್ಸವದಲ್ಲಿ ಮಿಂಚಿದ ಕೊಕೊವಾ ಕಾಯಿ. ತಿಂದವರು ಥೇಟ್ ಚಾಕೊಲೇಟ್ ರುಚಿ ಎಂದರಂತೆ. ಅಪ್ಪಟ ಕಂದು ಚಾಕೊಲೇಟ್‌ನಲ್ಲಿ ಇದನ್ನು ಮಾಡಿದ ಮಂದಿ ತಿರುಪತಿ ಲಡ್ಡುವಿನಂತೆ ಹಂಚಲು ಹೋಗಿ ಈಗ ದಿವಾಳಿ ಅಂಚಿಗೆ ನಿಂತಿದ್ದಾರಂತೆ. ಪ್ರಚಾರವನ್ನು ಪುಕ್ಕಟೆ ಮಾಡಲು ಹೋಗಿದ್ದೇ ಈಗ ಪೇಚಿಗಿಟ್ಟುಕೊಂಡಿದೆ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65